## ಮಧ್ಯಂತರ ಅರ್ಜಿ  ನಂ. 7 ರ ಮೇಲೆ ಆದೇಶ

1. ಅರ್ಜಿದಾರ/ 1 ನೇ ಪ್ರತಿವಾದಿ ಪ್ರತಿವಾದಪತ್ರದ ಪ್ಯಾರಾ ನಂ. 4 ಹಾಗೂ 7 ರಲ್ಲಿ ತಿದ್ದುಪಡಿ ಕೇಳಿ ಪ್ರಸ್ತುತ ಅರ್ಜಿ ಸಲ್ಲಿಸಿರುತ್ತಾರೆ.

2. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ಪ್ರತಿವಾದಪತ್ರ ಸಲ್ಲಿಸುವ ಸಮಯದಲ್ಲಿ ಸ. ನಂ. 616/3 ಇದು ಅಜ್ಜನ ಗೇಣಿ ಆಸ್ತಿ ಎಂಬುವ ಅಭಿಪ್ರಾಯದಿಂದ ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ಪ್ರತಿವಾದಪತ್ರದಲ್ಲಿ ನಮೂದಿಸಲಾಗಿದೆ. ಸದರಿ ಜಮೀನಿಗೆ ಸಂಬಂಧಿಸಿದ ಮುಟೇಶನ್ ಎಂಟ್ರಿಗಳನ್ನು ನಂತರದಲ್ಲಿ ತೆಗೆದು ನೋಡಲು ಸದರಿ ಆಸ್ತಿಗೆ ನನ್ನ ದೊಡ್ಡಪ್ಪ ಕೀರಾ ತೂಕಪ್ಪಾ ನಾಯ್ಕು ಗೇಣಿದಾರನಿದ್ದು, ಆ ನಂತರ ಅರ್ಧ ಆಸ್ತಿಯನ್ನು ನನ್ನ ತಂದೆಗೆ ನೀಡಿದ್ದು ಕಂಡುಬರುತ್ತದೆ. ಕಾರಣ ಸ ನಂ. 616/3 ಇದು ನಮ್ಮ ತಂದೆಗೆ ಆತನ ಅಣ್ಣನಿಂದ ಕೊಡಲ್ಪಟ್ಟ ಜಮೀನಾಗಿದ್ದು, ಪಿತ್ರಾರ್ಜಿತ ಆಸ್ತಿಯಾಗಿರುವುದಿಲ್ಲ. ಸದರಿ ಸಂಗತಿಗಳು ಕಂದಾಯ ಇಲಾಖೆಯಿಂದ ಆದ ಮುಟೇಶನ್ ವರದಿ ತೆಗೆದು ನೋಡಿದಾಗ ಗೊತ್ತಾಗಿದ್ದು, ಪ್ರತಿವಾದಪತ್ರ ಸಲ್ಲಿಸುವ ಸಮಯದಲ್ಲಿ ಅರ್ಜಿ ನೀಡಿದ್ದರೂ ಸಹ ಅದು ಸಮಯಕ್ಕೆ ಸರಿಯಾಗಿ ದೊರೆಯದೇ ಇರುವುದು ತಿದ್ದುಪಡಿಯಲ್ಲಿ ತಿಳಿಸಿದ ಸಂಗತಿ ಕುರಿತಾಗಿ ಬರೆಯಲು ಅಸಾಧ್ಯವಾಗಿತ್ತು. ಒಂದು ವೇಳೆ ಪ್ರತಿವಾದಪತ್ರದ ತಿದ್ದುಪಡಿಗೆ ಅವಕಾಶ ನೀಡದೇ ಇದ್ದರೆ ತುಂಬಲಾರದ ಹಾನಿ ವ, ಲುಕ್ಸಾನು ಉಂಟಾಗುತ್ತದೆ ಎಂದು ತಿಳಿಸಿರುತ್ತಾರೆ.

3. ಸದರಿ ಅರ್ಜಿಗೆ ತಕರಾರು ಸಲ್ಲಿಸಿ ಪ್ರಮಾಣಪತ್ರದಲ್ಲಿ ತಿಳಿಸಿದ ಸಂಗತಿ ಕಾಲ್ಪನಿಕ ಹಾಗೂ ಯಾವುದೇ ಪೂರಕ ಕಾರಣವನ್ನು ಹೊಂದಿರುವುದಿಲ್ಲ ಮತ್ತು ವಿಳಂಬದ ಕುರಿತಾಗಿ ಅರ್ಜಿಯಲ್ಲಿ ಸರಿಯಾಗಿ ನಮೂದಿಸಿರುವುದಿಲ್ಲ. ಒಂದು ವೇಳೆ ಅರ್ಜಿಯಲ್ಲಿ ತಿಳಿಸಿದಂತೆ ಆದೇಶಿಸಿದರೆ ದಾವೆಯ ಮೂಲ ಸ್ವರೂಪವೇ ಬದಲಾಗಿ ವಾದಿಯರಿಗೆ ತುಂಬಲಾರದ ಹಾನಿ ವ, ತೊಂದರೆ ಉಂಟಾಗುತ್ತದೆಂದು ತಿಳಿಸಿರುತ್ತಾರೆ.

4. ಮುಂದುವರೆದು ವಾದಿಯರು ಹಾಗೂ ಪ್ರತಿವಾದಿಯರು ಅವಿಭಕ್ತ ಕುಟುಂಬದ ಸದಸ್ಯರಿದ್ದು, ದಾವಾಸ್ತಿಗಳ ಸರಸ-ನಿರಸ ವಾಟ್ನಿ ಸಲುವಾಗಿ ಸಲ್ಲಿಸಿದ್ದು, ದಾವೆಯಲ್ಲಿ ತಿಳಿಸಿದ ಪಕ್ಷಗಾರರ ಲಿಖಿತ ಹೇಳಿಕೆಗಳ ಮೇಲೆ ದಾವೆಯನ್ನು ನಿರ್ಧರಿಸಲು ಅವಕಾಶವಿರುವುದರಿಂದ ವಿಳಂಬದ ಸಲುವಾಗಿ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

5. ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ..........

**<u>ಅಂಶಗಳು</u>**

1. ಮಧ್ಯಂತರ ಅರ್ಜಿಯಲ್ಲಿ ಕೇಳಿದ ಪರಿಹಾರ ಪಡೆಯಲು 1 ನೇ ಪ್ರತಿವಾದಿ ಅರ್ಹರಿರುತ್ತಾರೆಯೇ?

2. ಯಾವ ಆದೇಶ ?

6. ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆ:

ಅಂಶ ನಂ. 1: ಸಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

## ಕಾರಣಗಳು

7. **ಅಂಶ ನಂ.1**:- ದಾವಾಸ್ತಿಗಳಲ್ಲಿ ಪಾಲುವಾಟ್ನಿ ಕೇಳಿ ವಾದಿಯರು ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ. ಪಿಡಬ್ಲ್ಯೂ -1 ರವರ ಮುಂದುವರೆದ ಪಾಟೀಸವಾಲಿಗಾಗಿ ದಾವೆಯನ್ನು ನೇಮಿಸಿದಾಗ ಪ್ರಸ್ತುತ ಅರ್ಜಿ ಸಲ್ಲಿಸಿರುತ್ತಾರೆ . ದಾವೆಯಲ್ಲಿ ಪಕ್ಷಗಾರರ ನಡುವೆ ಇರುವ ವಿವಾಧ್ಯವನ್ನು ಬಗೆಹರಿಸಲು ಅವಶ್ಯಕವಾದ ಯಾವುದೇ ಸಂಗತಿಯನ್ನು ವಾದ-ಪ್ರತಿವಾದಪತ್ರದಲ್ಲಿ ಸೇರ್ಪಡಿಸಲು ಪಕ್ಷಗಾರರು ಸ್ವತಂತ್ರರಿರುತ್ತಾರೆ. ಆದರೆ ಅಂತಹ ತಿದ್ದುಪಡಿಯನ್ನು ದಾವೆಯ ವಿಚಾರಣೆಯ ಪ್ರಾರಂಭದ ಪೂರ್ವದಲ್ಲಿ ಸೇರಿಸಲು ಯಾವ ತೊಂದರೆ ಇತ್ತು ಎಂಬುವುದನ್ನು ಪೂರಕವಾಗಿ ತಿಳಿಸದೇ ಅಂತಹ ತಿದ್ದುಪಡಿಯ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲವೆಂದು ಸ್ಪಷ್ಟಪಡಿಸುತ್ತದೆ.

8. ನ್ಯಾಯದ ವಿಫಲತೆಯಾಗದ ಹೊರತು ತಿದ್ದುಪಡಿಗೆ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಬಾರದೆಂದು ಹಲವಾರು ನಿರ್ಧರಿತ ಪ್ರಕರಣಗಳಲ್ಲಿ ಆಗಾಗ ಅವಲೋಕಿಸಲಾಗಿದೆ. ಪ್ರಸ್ತುತ ದಾವೆಯಲ್ಲಿ ದಾವಾಸ್ತಿಗಳಲ್ಲಿ ಸ. ನಂ. 616/3

ಇದು ಯಾವ ಮೂಲದಿಂದ ಕುಟುಂಬಕ್ಕೆ ಬಂದಿರುತ್ತದೆಂದು ಈ ಮೊದಲು ಪ್ರತಿವಾದಿಯ ಪರ ತೆಗೆದುಕೊಂಡ ಪ್ರತಿರಕ್ಷಣಾ ಹೇಳಿಕೆ ತಪ್ಪು ತಿಳುವಳಿಕೆಯಿಂದ ಕೂಡಿದ್ದು, ಅದನ್ನು ಸರಿಪಡಿಸಿಕೊಳ್ಳಲು ಪ್ರತಿವಾದಪತ್ರದ ತಿದ್ದುಪಡಿ ಕೇಳಿರುತ್ತಾರೆ. ದಾವೆಯು ಪಾಲುವಾಟ್ನಿ ಸಲುವಾಗಿರುವುದರಿಂದ ಆಸ್ತಿಗಳು ಕುಟುಂಬಕ್ಕೆ ಯಾವ ಮೂಲದಿಂದ ಬಂದಿರುತ್ತದೆಂದು ಸಾಬೀತುಪಡಿಸುವ ಪ್ರಾಥಮಿಕ ಜವಾಬ್ದಾರಿ ಪಕ್ಷಗಾರರ ಮೇಲಿರುತ್ತದೆ. ಕಾರಣ ಈ ಕುರಿತು ಪ್ರತಿವಾದಿ ತಿದ್ದುಪಡಿ ಕುರಿತು ಕೇಳಿದ ಮಾಗಣಿ ಪುರಸ್ಕರಿಸಿದರೆ ಆ ಕುರಿತು ಸಾಬೀತುಪಡಿಸುವ ಹೊಣೆಗಾರಿಕೆ ಪ್ರತಿವಾದಿಯರ ಮೇಲಿರುತ್ತದೆ. ಕಾರಣ ಕೇವಲ ಸಾಕ್ಷ್ಯಾಧಾರ ಪ್ರಾರಂಭವಾಗಿದೆ ಎಂಬುವ ಕಾರಣಕ್ಕೆ ಅರ್ಜಿಯನ್ನು ತಿರಸ್ಕರಿಸಲಾಗದು. ಬದಲಿಗೆ ಅರ್ಜಿಯನ್ನು ಖರ್ಚು ಸಹಿತ ಪುರಸ್ಕರಿಸುವುದರಿಂದ ವಾದಿಯರ ಹಿತವನ್ನು ಸಹ ಕಾಯ್ದುಂತಾಗುತ್ತದೆ. ಕಾರಣ ಅರ್ಜಿಯನ್ನು " **ಸಕಾರಾತ್ಮಕ"** ಎಂದು ಉತ್ತರಿಸಿದ್ದೇನೆ.

9. **ಅಂಶ ನಂ. 2**:- ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

**ಆದೇಶ**

ಮಧ್ಯಂತರ ಅರ್ಜಿ ನಂ.7 ನ್ನು ರೂ. 300/- ಖರ್ಚಿನ ಮೇರೆಗೆ ಪುರಸ್ಕರಿಸಲಾಗಿದೆ.

ವಾದಪತ್ರದ ತಿದ್ದುಪಡಿಗಾಗಿ ಪ್ರಕರಣವನ್ನು ದಿಃ 04-03-2024 ರಂದು ಕರೆಯಿರಿ.

Sd/-

**ಸಿವಿಲ್ ನ್ಯಾಯಾಧೀಶರು, ಅಂಕೋಲಾ.**